**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿಸಿ ನಂ. 210/ 2021**

| | | |
|---|---|---|
| ಸಾಕ್ಷಿಯ ಹೆಸರು | : ರಾಜಣ್ಣ ಜೆ.ವಿ | |
| ತಂದೆಯ ಹೆಸರು | : ಲೇಟ್ ವೆಂಕಟರಮಣಪ್ಪ | |
| ವಯಸ್ಸು | : 67 ವರ್ಷ | |
| ಉದ್ಯೋಗ | ನಿವೃತ್ತ ಎ.ಎಸ್.ಐ | ಚಾಸಾ -12 |
| ವಾಸ ಸ್ಥಳ | : ಬೆಂಗಳೂರು | ಪ್ರಾಸಾ -7 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ** 11.08.2026

**ಮುಖ್ಯ ವಿಚಾರಣೆ - ಮಾನ್ಯ ಸ.ಸ.ಅ. ರವರಿಂದ**

ನಾನು 2017 ನೇ ಸಾಲಿನಿಂದ 2018 ನೇ ಸಾಲಿನವರೆಗೆ ಕುಮಾರಸ್ವಾಮಿ ಲೇಔಟ್ ಪೋಲಿಸ್ ಠಾಣೆ ಬೆಂಗಳೂರಿನಲ್ಲಿ ಮುಖ್ಯ ಪೇದೆ ಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 10.11.2017 ರಂದು ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಪಿ.ಎಸ್.ಐ ರವರು ನನಗೂ ಹಾಗೂ ಚಾಸಾ 13 ರಿಂದ 15 ರವರಿಗೆ ನಮ್ಮ ಠಾಣಾ ಮೊ.ನಂ. 379/2017 ಪ್ರಕರಣದಲ್ಲಿ ಆರೋಪಿಗಳನ್ನು ಪತ್ತೆ ಮಾಡಿಕೊಂಡು ಬರಲು ಪಿ ಎಸ್ ಐ ರವರು ಕರ್ತವ್ಯಕ್ಕೆ ನೇಮಿಸಿರುತ್ತಾರೆ. ಅದರಂತೆ ನಾವು ನಮ್ಮ ಠಾಣಾ ಸರಹದ್ದಿನಲ್ಲಿ ಗಸ್ತು ಮಾಡಿಕೊಂಡು ಸುಮಾರು ರಾತ್ರಿ 10 ಗಂಟೆ ಸಮಯದಲ್ಲಿ ನಮ್ಮ ಠಾಣಾ ಸರಹದ್ದಿನಲ್ಲಿರುವ ಅಬ್ದುಲ್ ಕಲಾಂ ಪಾರ್ಕ ಹತ್ತಿರ ವಾಹನ ತಪಾಸಣೆ ಮಾಡುತ್ತಿರುವಾಗ ಯಾರೋ ಇಬ್ಬರು ಆಸಾಮಿಗಳು ಒಂದು ದ್ವಿಚಕ್ರ ವಾಹನದಲ್ಲಿ ಬರುತ್ತಿರುವುದನ್ನು ಕಂಡು ನಾವು ತಡೆಯಲು ಹೋದಾಗ ಅವರು ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿರುತ್ತಾರೆ. ತಕ್ಷಣ ನಾವು ಅವರನ್ನು ಹಿಡಿದು ಅವರ ಹೆಸರು ವಿಳಾಸ ಕೇಳಲಾಗಿ ಅವರ ಹೆಸರು ಮಹಮ್ಮದ್ ಪರಾಜ್ @ ದೇವಿ ಮತ್ತೊಬ್ಬ ಸೈಯದ್ ಹಬೀಬ್ @ ಹನಿಸಿಂಗ್ ಎಂದು ತಿಳಿಸಿರುತ್ತಾರೆ. ಸದರಿ ಆಸಾಮಿಗಳ ಮೇಲೆ ನಮಗೆ ಅನುಮಾನ ಬಂದು ಆಸಾಮಿಗಳನ್ನು ಮತ್ತು ಅವರ ಸುಜುಕಿ ಆಕ್ಸಿಸ್ ಬಿಳಿ ಬಣ್ಣದ ವಾಹನ ಸಂಖ್ಯೆ ಕೆಎ-05-ಎಸ್-2378 ವನ್ನು ಹಾಜರು ಪಡಿಸಿ ಮುಂದಿನ ಕ್ರಮಕ್ಕಾಗಿ ಪಿ.ಎಸ್.ಐ ರವರಿಗೆ ವರದಿಯನ್ನು ನೀಡಿರುತ್ತೇವೆ. ಸದರಿ ಜೆರಾಕ್ಸ ಪ್ರತಿಯಲ್ಲಿರುವ ವರದಿಯನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**2 ನೇ ಆರೋಪಿ ಪರ ಪಾಟೀ ಸವಾಲು ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು. )

ಓ ಹೇ ಕೇ ಸಾ ಸ ಇ ಒ

(ಸುನೀತ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.